ಕೇಳಬೇಕೋ ಬೇಡವೋ?''

''ಸಾರಿ ಆಲ್ಬರ್ಟ್. ಮುಂದುವರೆಸು...''

ಅವನು ಬೀರುವಿನಿಂದ ಮತ್ತಷ್ಟು ನಿಯತಕಾಲಿಕಗಳನ್ನು ಹೊರಗೆಳೆದ. ಒಂದನ್ನು ಎತ್ತಿಕೊಳ್ಳುತ್ತಾ ಹೇಳತೊಡಗಿದ: ''1939ರಲ್ಲಿ ಹೇಯ್ಸ್ ಎಂಬುವವನು ರಾಜಪಾಕದ ಬಗ್ಗೆ ಪ್ರಯೋಗಗಳನ್ನು ಮಾಡತೊಡಗಿದ. ವಿವಿಧ ಪ್ರಮಾಣದಲ್ಲಿ ರಾಜಪಾಕವನ್ನು ಇಪ್ಪತ್ತೊಂದು ದಿವಸ ವಿವಿಧ ಪ್ರಾಯದ ಇಲಿಗಳಿಗೆ ತಿನ್ನಿಸಿದ. ತಿನ್ನಿಸಿದ ರಾಜಪಾಕಕ್ಕನುಗುಣವಾಗಿ ಇಲಿಗಳ ಅಂಡಾಶಯಗಳು ಹೆಚ್ಚಿನ ಬೆಳವಣಿಗೆ ಹೊಂದಿದ್ದವು...''

''ಇದನ್ನು ನಾನು ಮೊದಲೇ ಊಹಿಸಿದ್ದೆ...'' ಮೇಬಲ್ ಬಿಕ್ಕಳಿಸಿದಳು.

''ಏನು ಊಹಿಸಿದ್ದೆ ಮೇಬಲ್?''

''ಏನಾದರೂ ಅನಾಹುತ ಖಂಡಿತ ಆಗಲಿದೆಯೆಂದು.''

''ನಿನಗೆ ಏನೂ ಅರ್ಥವಾಗುತ್ತಿಲ್ಲ ಕಣೆ ಮೇಬಲ್! ಒಂದು ಬಂಜೆ ಇಲಿಗೆ ಕೂಡ ರಾಜಪಾಕದ ಸೇವನೆಯಿಂದ ಸಂತಾನ ಪ್ರಾಪ್ತಿಯಾಗಿದೆ ಎಂದು ಸ್ಟಿಲ್ಸ್ ಮತ್ತು ಬರ್ಡೆಟ್ ಎಂಬುವ ವಿಜ್ಞಾನಿಗಳು ಹೇಳುತ್ತಾರೆ...''

''ಇರಬಹುದು ಆಲ್ಬರ್ಟ್. ಆದರೆ, ಇಷ್ಟು ಸಣ್ಣ ಮಗುಗೆ ನೀನು ಕೊಡುತ್ತಿರುವ ರಾಜಪಾಕದ ಡೋಜ್ ಹೆಚ್ಚೇ ಆಗಿದೆ ಎಂದು ನನ್ನ ಭಾವನೆ. ನನಗೆ ಇದರ ಬಗ್ಗೆ ಎಳ್ಳಷ್ಟು ನಂಬಿಕೆ ಇಲ್ಲ. ಹಾಗಾದರೆ, ಆ ನಿಮ್ಮ ವಿಜ್ಞಾನಿಗಳು ಇದುವರೆಗೆ ರಾಜಪಾಕವನ್ನು ಮನುಷ್ಯರ ಮೇಲೆ ಏಕೆ ಪ್ರಯೋಗಿಸಿಲ್ಲ? ಇಲಿಗಳ ಮೇಲೆಯೇ ಏಕೆ? ಅವರೇ ಸ್ವಲ್ಪ ಸೇವಿಸಬಹುದಿತ್ತಲ್ಲವೇ?... ಅವರು ಬುದ್ಧಿವಂತ್ರು, ಅದಕ್ಕೇ ತಿಂದಿಲ್ಲ. ಡಾ. ಬ್ಯಾಂಟಿಂಗನಿಗೆ ತನ್ನ ಅಂಡಾಶಯ ಎಲ್ಲಿ ಬೆಳೆಯುತ್ತೋ ಅಂತ ಹೆದರಿಕೆಯಾಗಿರಬೇಕು!''

''ಹಾಗೇನೂ ಇಲ್ಲ ಮೇಬಲ್... ರಾಜಪಾಕವನ್ನು ಮನುಷ್ಯರ ಮೇಲೂ ಪ್ರಯೋಗಿಸಿದ್ದಾರೆ. ಇಲ್ಲಿ ಕೇಳು: 1953ರಲ್ಲಿ ಕೆಲವು ವೈದ್ಯರು ಕೀಲು ನೋವಿರುವವರಿಗೆ, ಸಕ್ಕರೆ ಕಾಯಿಲೆಯವರಿಗೆ, ತಂಬಾಕು ಸೇವನೆ ಮಾಡುತ್ತಿರುವವರಿಗೆ, ನಿಮಿರು ದೌರ್ಬಲ್ಯ ಇರುವ ಗಂಡಸರಿಗೆ, ಆಸ್ತಮಾ ಪೀಡಿತರಿಗೆ ಮತ್ತು ಗೌಟ್ ತೊಂದರೆಯವರಿಗೆ ರಾಜಪಾಕದ ಸಣ್ಣ ಡೋಸ್ ಕೊಟ್ಟಿದ್ದಾರೆ. ಇಲ್ಲಿ ಅದರ ಸವಿಸ್ತಾರ ವರದಿ ಇದೆ. ಇಲ್ಲಿ ಒಬ್ಬನ ಅನುಭವವನ್ನು ಅವನ ಮಾತಿನಲ್ಲೇ ಕೇಳು ಮೇಬಲ್...''

''ಮಗು ಅಳ್ತಾ ಇದೆ ಆಲ್ಬರ್ಟ್...''

ಅವನು ನಿಯತಕಾಲಿಕದ ಮೇಲಿಂದ ಅವಳೆಡೆಗೆ ನೋಡಿದ. ಮೇಲೆ ಮಗು ಜೋರಾಗಿ ಕಿರುಚುವುದು ಕೇಳಿಸುತ್ತಿತ್ತು.

''ಹಸಿವಾಗಿರಬೇಕು...'' ಅವನು ಹೇಳಿದ.

ಮೇಬಲ್ ಗಡಿಯಾರದ ಮೇಲೆ ಕಣ್ಣು ಹಾಯಿಸಿದಳು.

''ದೇವರೇ...'' ಅವಳು ಹೌಹಾರಿದಳು. ''ಮಗುವಿನ ಫೀಡಿಂಗ್ ಟೈಮ್ ದಾಟಿ ಹೋಗಿದೆ ಆಲ್ಬರ್ಟ್!... ನೀನು ಹಾಲು ತಯಾರು ಮಾಡು, ನಾನು ಮಗುವನ್ನು ತರುತ್ತೇನೆ. ಬೇಗ, ಬೇಗ...'' ಎನ್ನುತ್ತಾ ಅವಳು ಓಡುತ್ತಾ ಮೆಟ್ಟಿಲು ಹತ್ತತೊಡಗಿದಳು.

ಅವಳು ಮಗುವಿನೊಂದಿಗೆ ಮೆಟ್ಟಿಲು ಇಳಿಯುತ್ತಿರುವಂತೆ ಆಲ್ಬರ್ಟ್ ಹಾಲಿನ ಪಾತ್ರೆಯೊಡನೆ ಹಜಾರಕ್ಕೆ ಬಂದ. ಹಾಲನ್ನು ಬಾಟಲಿಗೆ ತುಂಬಿಸುತ್ತಾ, ''ತೆಗೆದುಕೋ ಮೇಬಲ್, ನೀನು ಪರೀಕ್ಷಿಸುವ ಅಗತ್ಯವಿಲ್ಲ. ಹದ ಸರಿಯಾಗಿದೆ.''

ಎತ್ತಿಕೊಂಡಿದ್ದ ಭಂಗಿಯಲ್ಲೇ ಮೇಬಲ್ ಬಾಟಲನ್ನು ಮಗುವಿನ ಬಾಯಿಗೆ ತುರುಕಿದಳು. ಅಷ್ಟೇ,